ಅ) 24-06-94 ರಿಂದ ಕರ್ನಾಟಕ ರಾಜ್ಯ ಅನುದಾನಿತ ಖಾಸಗಿ ಕಾಲೇಜು ಸ್ಟಾಪ್-ಗ್ಯಾಪ್ ಉಪನ್ಯಾಸಕರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಕಾಲೇಜು ಶಿಕ್ಷಣ ನಿರ್ದೇಶನಾಲಯದ ಆವರಣದಲ್ಲಿ ಧರಣಿ ಸತ್ಯಾಗ್ರಹ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಉಪನ್ಯಾಸಕರ ಬೇಡಿಕೆಗಳ ಬಗ್ಗೆ ಕ್ರಮ ಕೈಗೊಳ್ಳುವರೇ;

ಇ) 1992 ಕ್ಕಿಂತ ಪೂರ್ವದಲ್ಲಿ ನೇಮಕಗೊಂಡ ಎಲ್ಲಾ ಸ್ಟಾಪ್-ಗ್ಯಾಪ್ ಉಪ ನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ ರಾಜ್ಯದ ಮತ್ತು ದೇಶದ ಉಚ್ಚ ನ್ಯಾಯಾಲಯಗಳ ತೀರ್ಪಿನ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) ಹೌದು.

ಆ) ಹೌದು.

ಇ) ಈ ವರೆಗೆ 356 ಸ್ಟಾಪ್-ಗ್ಯಾಪ್ ಉಪನ್ಯಾಸಕರ ಸೇವೆಯನ್ನು ಸಕ್ರಮಗೊಳಿಸ ಲಾಗಿದೆ. 305 ಸ್ಟಾಪ್-ಗ್ಯಾಪ್ ಉಪನ್ಯಾಸಕರಿಗೆ ಖಾಯಂ ಉಪನ್ಯಾಸಕರುಗಳಿಗೆ ನೀಡುವ ವೇತನವನ್ನು ಇವರಿಗೂ ಸಹ ನೀಡುವಂತೆ ಆದೇಶಿಸಲಾಗಿದೆ. ಅರ್ಹರಿರುವ ಎಲ್ಲಾ ಸ್ಟಾಪ್-ಗ್ಯಾಪ್ ಉಪನ್ಯಾಸಕರುಗಳ ಸೇವೆಯನ್ನು ಸಕ್ರಮಗೊಳಿಸಲು ಮತ್ತು ಸೇವೆಯನ್ನು ಸಕ್ರಮಗೊಳಿಸಲು ಮತ್ತು ವೇತನ ಪಾವತಿ ಮಾಡುವ ಬಗ್ಗೆ ಇರುವ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಇವರ ನೇತೃತ್ವ ದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದ್ದು, ಆ ಸಮಿತಿಯು ವರದಿಯನ್ನು ನೀಡಿದೆ.

ಸದರಿ ವರದಿಯನ್ನು ಪರಿಶೀಲಿಸಲಾಗುತ್ತಿದೆ.

ವರದಿಯಲ್ಲಿ ಪ್ರತಿಯೊಂದು ಸ್ಟಾಪ್-ಗ್ಯಾಪ್ ಉಪನ್ಯಾಸಕರ ಪ್ರಕರಣವನ್ನು ಪರಿ ಶೀಲಿಸಿ, ಅರ್ಹ ಸ್ಟಾಪ್-ಗ್ಯಾಪ್ ಉಪನ್ಯಾಸಕರನ್ನು ಗುರುತಿಸಲು ಒಂದು ಸ್ಕ್ರೀನಿಂಗ್ ಸಮಿತಿ ರಚಿಸಲು ಶಿಫಾರಸ್ಸು ಮಾಡಲಾಗಿದೆ.

ವಿಷಯ :- ರಾಜ್ಯದಲ್ಲಿ ಏಡ್ಸ್ ರೋಗ ನಿವಾರಣೆಗೆ ಕೈಗೊಂಡ ಕಾರ್ಯ ಕ್ರಮಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 744 (967)

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ರಾಜ್ಯದಲ್ಲಿ ಏಡ್ಸ್ ರೋಗಕ್ಕೆ ತುತ್ತಾದವರ ಸಂಖ್ಯೆ ಎಷ್ಟು?

2. ಏಡ್ಸ್ ರೋಗ ನಿವಾರಣೆಗೋಸ್ಕರ ರಾಜ್ಯ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು? (ವಿವರ ನೀಡುವುದು)

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

1. ರಾಜ್ಯದಲ್ಲಿ 1996 ರ ಜೂನ್ ಅಂತ್ಯದವರೆಗೆ 48 ಮಂದಿ ಏಡ್ಸ್ ರೋಗದಿಂದ ಸತ್ತಿರುತ್ತಾರೆ.

2. ಏಡ್ಸ್ ರೋಗದ ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರವು ಭಾರತ ಸರ್ಕಾರದ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯ ಮಾರ್ಗಸೂಚಿಯಂತೆ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಏಡ್ಸ್ ರೋಗ ನಿಯಂತ್ರಣಕ್ಕಾಗಿ ಮುನ್ನೆಚ್ಚರಿಕೆ ಕೈಗೊಳ್ಳಲು 3 (ಮೂರು) ಏಡ್ಸ್ ಸಮೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಹೆಚ್.ಐ.ವಿ. ಸೋಂಕಿನ ಪತ್ತೆಗೆ ಪರೀಕ್ಷೆ ಹಾಗೂ ಸೋಂಕಿನ ಪರಿಮಾಣವನ್ನು ತಿಳಿಯಲು ಸಮೀಕ್ಷೆಗಳನ್ನು ನಡೆಸಲಾಗುತ್ತಿದೆ. ರಕ್ತ ಸುರಕ್ಷತೆಗಾಗಿ (ಹತ್ತು) 10 ವಲಯ ರಕ್ತ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲ ರಕ್ತ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲ ರಕ್ತ ನಿಧಿ ಕೇಂದ್ರಗಳನ್ನು ಏಡ್ಸ್ ಸೋಂಕು ಪರೀಕ್ಷೆಗಾಗಿ ವಲಯ ರಕ್ತ ತಪಾಸಣಾ ಕೇಂದ್ರಕ್ಕೆ ಜೋಡಣೆ ಮಾಡಲಾಗಿದೆ. ರಾಜ್ಯದಲ್ಲಿರುವ ಒಟ್ಟು 42 ರಕ್ತ ನಿಧಿ ಕೇಂದ್ರಗಳನ್ನು ಹಂತ ಹಂತವಾಗಿ ಆಧುನೀಕರಿಸಲಾಗುತ್ತಿದೆ. ರಾಜ್ಯದಲ್ಲಿ ಹಿರಿಯ ಆಸ್ಪತ್ರೆಗಳ, ಜಿಲ್ಲಾ ಆಸ್ಪತ್ರೆಗಳ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಒಟ್ಟು 24 ಲೈಗಿಂಕ ಚಿಕಿತ್ಸಾಲಯಗಳನ್ನು ಬಲವರ್ದನೆ ಮಾಡಲಾಗಿದೆ. ಮತ್ತು ಚಿಕಿತ್ಸೆಯ ಜೊತೆಗೆ ಸುರಕ್ಷಿತ ಲೈಂಗಿಕತೆ ಬಗ್ಗೆ ತಿಳಿವಳಿಕೆ ನೀಡಲಾಗುತ್ತಿದೆ.

ಏಡ್ಸ್ ನಿಯಂತ್ರಣದ ಬಗ್ಗೆ ಮಾಹಿತಿ ನೀಡಲು ಸಮೂಹ ಮಾಧ್ಯಮ ಸಂಪರ್ಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲಾ ಆಸ್ಪತ್ರೆಗಳಲ್ಲಿ ಸಮರ್ಪಕವಾಗಿ ಸಂಸ್ಕರಣೆ ಮಾಡಿದ ಸೂಜಿ, ಸಿರಿಂಜ್‌ಗಳನ್ನು ಮತ್ತು ಉಪಕರಣಗಳನ್ನು ಬಳಸಲು ಸೂಚಿಸಲಾಗಿದೆ.

ವಿಷಯ :- ಖಾಸಗೀ ಕಾಲೇಜುಗಳಲ್ಲಿ ದೊಡ್ಡ ಪ್ರಮಾಣದ ಮೊತ್ತವನ್ನು ದಾನ ಶುಲ್ಕವಾಗಿ ವಸೂಲು ಮಾಡುತ್ತಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 745 (966)

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪದವಿ ಪೂರ್ವ ತರಗತಿಗಳಿಗೆ ಸೇರ್ಪಡೆಗೊಳಿಸುವ ಸಂದರ್ಭದಲ್ಲಿ ಖಾಸಗಿ ಕಾಲೇಜುಗಳು ದೊಡ್ಡ ಪ್ರಮಾಣದ ಮೊತ್ತವನ್ನು ದಾನ ಶುಲ್ಕವಾಗಿ ಬೇರೆ ಬೇರೆ ಹೆಸರಿನಲ್ಲಿ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ತಮ್ಮ ವಿದ್ಯಾಸಂಸ್ಥೆಯಲ್ಲಿಯೇ ಪ್ರೌಢಶಿಕ್ಷಣ ಪಡೆದಿರುವ ವಿದ್ಯಾರ್ಥಿಗಳಿಗೆ ಪಿ.ಯು.ಸಿ. ಪ್ರವೇಶಕೊಡದೆ ಅನ್ಯ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವ ಬಗ್ಗೆ ಸರ್ಕಾರ ದವರ ಗಮನಕ್ಕೆ ಬಂದಿದೆಯೇ?